ಅದಕ್ಕಿಂತ ಮೂರು ವರ್ಷಗಳಿಗಿಂತ ಮೊದಲೇ ಪ್ರಕಟವಾಗಿತ್ತು. ಪತ್ರಕರ್ತರಾಗಿ ('ಪ್ರಭಾತ' ಮತ್ತು 'ಸ್ವದೇಶಾಭಿಮಾನಿ') ಮಂಗಳೂರು ನಗರದಲ್ಲಿದ್ದು ಬದುಕಿನ ಬವಣೆಗಳನ್ನು ಕಂಡ ಕಯ್ಯಾರ ಕಿಂಞಣ್ಣ ರೈ ಹಿರಿಯರಾದರೆ ಅವರಿಗಿಂತ ಒಂಬತ್ತು ವರ್ಷ ಕಿರಿಯರಾದ, ಹದಿಹರೆಯದ ನಿರಂಜನ ಬಾಲ್ಯದಿಂದಲೇ ಬದುಕಿನ ಬೇಗೆಯಲ್ಲಿ ಬೆಂದವರು. 1938ರಿಂದ 1941ರವರೆಗೆ ಕಾಸರಗೋಡಿನ ನೀಲೇಶ್ವರ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ ಅವರಿಗೆ ಕೇರಳದ ಕಮ್ಯೂನಿಸ್ಟ್ ಕಾರ್ಯಕರ್ತರ ಜತೆಗಿನ ಒಡನಾಟ ಲಭ್ಯವಾಯಿತು. ಹೀಗೆ ಅವರ ಒಳನೋಟಗಳಲ್ಲಿ ತಾತ್ವಿಕ ಚಿಂತನೆಯ ಗಟ್ಟಿತನ ಮೂಡಲು ಅವಕಾಶ ದೊರೆತಂತಾಯಿತು. 1942ರಲ್ಲಿ ಅವರು ಮಂಗಳೂರಿಗೆ ಬಂದು ಕಡೆಂಗೋಡ್ಲು ಶಂಕರ ಭಟ್ಟರ 'ರಾಷ್ಟ್ರಬಂಧು' ಪತ್ರಿಕೆಯಲ್ಲಿ ಪತ್ರಕರ್ತರಾಗಿ ಬದುಕು ಪ್ರಾರಂಭಿಸಿದರು. ಕಡೆಂಗೋಡ್ಲು ಅವರು ಕೂಡ ಪ್ರಗತಿಶೀಲ ಕಾದಂಬರಿಕಾರರೇ (ಕಾದಂಬರಿ– 'ಲೋಕದ ಕಣ್ಣು', 1948) ಎನ್ನುವುದನ್ನು ಮರೆಯುವಂತಿಲ್ಲ. ನಿರಂಜನರು ಮಂಗಳೂರಿಲ್ಲಿ ಆಗಲೇ ಪತ್ರಕರ್ತರಾಗಿ ಹೆಸರು ಮಾಡಿದ್ದ ಕಯ್ಯಾರರಂತಹವರ ಒಡನಾಟಕ್ಕೆ ಬಂದರು. ಅವರ ಮೊದಲನೆಯ ಸಂಕಲನ 'ಅಯ್ಯನ್ನೆ' ಪ್ರಕಟವಾದದ್ದು 1945ರಲ್ಲಿ. ಈ ಐತಿಹಾಸಿಕ ಮಾಹಿತಿಗಳು ಕಯ್ಯಾರರ ಮತ್ತು ಇತರರ ಹಿನ್ನೆಲೆಯನ್ನು ತಿಳಿದುಕೊಂಡು ಅವರ ಸಾಹಿತ್ಯ ಸಾಧನೆಗಳನ್ನು ಸರಿಯಾದ ಸ್ಥಾನಗಳಲ್ಲಿಟ್ಟು ಗ್ರಹಿಸಲು ನೆರವಾಗಬಹುದು.

ಪ್ರಗತಿಶೀಲತೆಯ ವ್ಯಾಖ್ಯಾನಕ್ಕೆ ಜಿ.ಎಚ್. ನಾಯಕರು 'ಕನ್ನಡ ಸಣ್ಣ ಕತೆಗಳು' (1978) ಸಂಕಲನದಲ್ಲಿ ಹೇಳಿರುವ ಈ ಮಾತುಗಳನ್ನು ಗಮನಿಸಬಹುದು: 'ನವೋದಯದವರಿಗೆ ಅನ್ಯಾಯಕ್ಕೆ, ದುರಂತಕ್ಕೆ ಗುರಿಯಾಗುವ ವ್ಯಕ್ತಿ ಒಂದು ವ್ಯಕ್ತಿ ಮಾತ್ರವಾಗಿ ಕಾಣಿಸದೆ ಒಂದು ತತ್ವದ, ಒಂದು ಅದರ್ಶ ಮೌಲ್ಯದ ಪ್ರತಿನಿಧಿಯಾಗಿ ಕಾಣುತ್ತಾನೆ... ಆದರೆ, ಅವನಿಗೆ ಅನ್ಯಾಯ ಮಾಡುವವರನ್ನು, ಕಷ್ಟಕ್ಕೆ ಗುರಿ ಮಾಡುವವರನ್ನು ವ್ಯಕ್ತಿಗಳಾಗಿ ಮಾತ್ರ ನೋಡುವ ಧೋರಣೆ ಇರುತ್ತದೆ. ಅಂಥವರಿಗೆ ಸಾಮಾಜಿಕ ಇಲ್ಲವೆ ತಾತ್ತ್ವಿಕ ಪ್ರಾತಿನಿಧ್ಯ ಇರುವುದಿಲ್ಲ. ಪ್ರಗತಿಶೀಲರಲ್ಲಿ ಹಾಗಲ್ಲ. ಅನ್ಯಾಯ ಮಾಡುವವನು, ಅನ್ಯಾಯಕ್ಕೆ ಒಳಗಾಗುವವನು ಎಲ್ಲರಿಗೂ ಪ್ರಾತಿನಿಧಿಕತೆ ಇರುತ್ತದೆ. ಅನ್ಯಾಯಕ್ಕೆ ಒಳಗಾಗುವ ವ್ಯಕ್ತಿ ದಲಿತ ವರ್ಗದ, ಶೋಷಿತ ವರ್ಗದ ಪ್ರತಿನಿಧಿಯಾದರೆ, ಅನ್ಯಾಯಕ್ಕೆ ಕಾರಣನಾಗುವ ವ್ಯಕ್ತಿ ಅಥವಾ ಸನ್ನಿವೇಶಗಳು ಸಮಾಜದ ಶೋಷಣೆಯ ವಿವಿಧ ಘಟಕಗಳು, ವಿವಿಧ ಉಪಕರಣಗಳು'.

ಇಲ್ಲಿ ಕಯ್ಯಾರ ಕಿಂಞಣ್ಣ ರೈ ಅವರ 'ಅನ್ನ ದೇವರು ಮತ್ತು ಇತರ ಕಥೆಗಳು' ಸಂಕಲನದ ಕಿರು ಪರಿಚಯವನ್ನು ಮಾಡಿಕೊಡಲಾಗಿದೆ. 'ಅನ್ನದೇವರು ಮತ್ತು ಇತರ ಕಥೆಗಳು' ಕಥಾ ಸಂಕಲನದಲ್ಲಿ ಮೂರು ವಿಶಿಷ್ಟ ಪ್ರಗತಿಶೀಲ ಕಥೆಗಳಿವೆ. ಅವು - 'ಅನ್ನ ದೇವರು', 'ಯಾರು ತಿಳಿಸಿದರು?' ಮತ್ತು 'ಕಳವಳದಲ್ಲಿ ಚಳವಳ'.

'ಅನ್ನ ದೇವರು' ಕಥೆಯಲ್ಲಿ ಬಡತನದಲ್ಲಿ ಬಿದ್ದು ಊಟಕ್ಕೂ ಇಲ್ಲದೆ ಹಸಿದುಕೊಂಡಿರುವ ಕಾರ್ಮಿಕರ ಕುಟುಂಬವೊಂದಿದೆ. ಕಥೆಯ ಪ್ರಾರಂಭದಲ್ಲಿ ಕಾರ್ಗತ್ತಲಲ್ಲಿ ಮತ್ತು ಮಳೆಯಲ್ಲಿ ಗುಡಿಸಲೊಂದರಲ್ಲಿ ಕುಳಿತು ಕಿಟಕಿಯಿಂದ ಹೊರಗೆ ನೋಡುತ್ತಿರುವ ಮುದುಕನ ಎರಡು ಚಿತ್ರಗಳು ಕಾಣುತ್ತಿರುತ್ತವೆ. ಒಂದು ಕಡೆಯಲ್ಲಿ ಕಮ್ಮಾರನ ಕೊಟ್ಟಿಗೆ ಅವನ ಕಣ್ಣಿಗೆ ಬೀಳುತ್ತದೆ. ಅದರಲ್ಲಿ ಉರಿಯುವ ಬೆಂಕಿ, ಅದರಿಂದ ಹಾರುವ ಕಿಡಿಗಳು ಮತ್ತು ಕಮ್ಮಾರ ಸುತ್ತಿಗೆಯಿಂದ ಬಡಿಯುವ ಸದ್ದು ಕಥೆಯ ಉದ್ದಕ್ಕೂ ಸಾಂಕೇತಿಕವಾಗಿ ಪ್ರಸ್ತುತವಾಗುತ್ತವೆ. ಮನೆ ಮಂದಿಯ ಹೊಟ್ಟೆಯಲ್ಲಿರುವ ಬೆಂಕಿಯನ್ನು ಅದು ಸೂಚಿಸುತ್ತದೆ.

ಮುದುಕನ ಮನೆಯ ಎದುರೇ ಕಾರ್ಖಾನೆಯ ಮಾಲೀಕರ ಬಂಗಲೆಯು ವಿದ್ಯುತ್ ದೀಪಗಳಿಂದ ಬೆಳಗುತ್ತಿದೆ. ಅದನ್ನೂ ಅವನು ನೋಡುತ್ತಿದ್ದಾನೆ. ಮುದುಕನೂ ಅವರ ಕಾರ್ಖಾನೆಯ ಕಾರ್ಮಿಕನಾಗಿದ್ದವನು, ಎರಡು ದಿನಗಳ ಹಿಂದೆ ಕ್ಷುಲ್ಲಕ ಕಾರಣಕ್ಕಾಗಿ ಅವನನ್ನು ಕೆಲಸದಿಂದ ಕಿತ್ತು ಹಾಕಿದ್ದರು. ಮನೆಗೆ ಆಹಾರ ಪದಾರ್ಥಗಳನ್ನು ತರುವ ದಾರಿಯೇ ಮುಚ್ಚಿಹೋಗಿ, ಎಲ್ಲರೂ ಉಪವಾಸ ಇದ್ದಾರೆ. ಮನೆಯಲ್ಲಿ ಮುದುಕ